# ಬರಲಿದೆ ಎಫ್‌ಬಿ ಮ್ಯೂಸಿಕ್ ವಿಡಿಯೊ ಆ್ಯಪ್!

■ ಶಶಿಕುಮಾರ್ ಸಿ.



ಬರಲಿದೆ ಎಫ್‌ಬಿ ಮ್ಯೂಸಿಕ್ ವಿಡಿಯೊ ಆ್ಯಪ್! ಫೇಸ್‌ಬುಕ್ ತನ್ನದೇ ಆದ ಮ್ಯೂಸಿಕ್ ವಿಡಿಯೊ ಆಧಾರಿತ ಆ್ಯಪ್ ಅನ್ನು ಅಭಿವೃದ್ಧಿಪಡಿಸಿದ್ದು, ಬಿಡುಗಡೆ ಮಾಡಲು ಸಿದ್ಧತೆ ನಡೆಸಿದೆ. ಇದು ಯುಟ್ಯೂಬ್‌ಗೆ ಪರ್ಯಾಯವಾಗಲಿದೆ ಎಂಬ ಮಾತುಗಳೂ ಕೇಳಿಬರುತ್ತಿವೆ.

ಸಾಮಾಜಿಕ ಜಾಲತಾಣಗಳ ಪೈಕಿ ಅತ್ಯಂತ ಜನಸ್ನೇಹಿಯಾಗಿ ಗುರುತಿಸಿಕೊಂಡಿರುವ ಫೇಸ್‌ಬುಕ್ ತನ್ನ ಬಳಕೆದಾರರನ್ನು ಇನ್ನಷ್ಟು ಆತ್ಮೀಯವಾಗಿ ಆವರಿಸಿಕೊಳ್ಳುವ ಸಲುವಾಗಿ ಈ ಆ್ಯಪ್ ಅಭಿವೃದ್ಧಿಗೆ ಕೈಹಾಕಿದೆ ಎನ್ನಲಾಗಿದೆ.

ಈಗಾಗಲೇ ಹಲವು ಫೀಚರ್ಸ್‌ಗಳನ್ನ ಪರಿಚಯಿಸಿ ಬಳಕೆದಾರರನ್ನು ಸೆಳೆದಿರುವ ಎಫ್‌ಬಿ, ಮ್ಯೂಸಿಕ್ ವಿಡಿಯೊ ಪ್ಲಾಟ್‌ಫಾರ್ಮ್ ಅನ್ನು ಪರಿಚಯಿಸಿ ತನ್ನದೇ ಆದ ಮ್ಯೂಸಿಕ್ ವಿಡಿಯೊ ಪ್ಲಾಟ್‌ಫಾರ್ಮ್‌ನಲ್ಲಿ ಪರವಾನಗಿ ಪಡೆದ ಮ್ಯೂಸಿಕ್ ವಿಡಿಯೊಗಳನ್ನು ಬಿಡುಗಡೆ ಮಾಡಲು ಉದ್ದೇಶಿಸಿದೆ.

## ಏನಿದು ಮ್ಯೂಸಿಕ್ ವಿಡಿಯೊ?

ಫೇಸ್‌ಬುಕ್‌ನ ಹೊಸ ಮಾದರಿಯ ಮ್ಯೂಸಿಕ್ ಆ್ಯಪ್ ಇದಾಗಿದ್ದು, ಇದನ್ನು ಡೌನ್‌ಲೋಡ್ ಮಾಡಿಕೊಂಡು ಫೇಸ್‌ಬುಕ್ ಖಾತೆಯೊಂದಿಗೆ ಇಂಟರ್‌ಲಿಂಕ್ ಮಾಡಬೇಕಾಗುತ್ತದೆ. ಬಳಕೆದಾರರಿಗೆ ತಮ್ಮ ಪೇಜ್‌ನಲ್ಲಿ ಹೊಸ ಮ್ಯೂಸಿಕ್ ವಿಡಿಯೊಗಳನ್ನು ಸೇರಿಸುವ ಫೀಚರ್ಸ್ ಅನ್ನು ಈ ಆ್ಯಪ್ ಒದಗಿಸುತ್ತದೆ. ತನ್ನ ಹೊಸ ಆ್ಯಪ್ ಬಗ್ಗೆ ಫೇಸ್‌ಬುಕ್, ಸಂಗೀತ ಕಲಾವಿದರ ಅಧಿಕೃತ ಪುಟಗಳಿಗೆ ಮಾಹಿತಿ ನೀಡುತ್ತಿದೆ ಎನ್ನಲಾಗಿದೆ.

ಹೊಸ ಫೀಚರ್ಸ್ ಅನ್ನು ಆನ್ ಮಾಡಿದರೆ, ಸಂಗೀತ ಕಲಾವಿದರ ಅಧಿಕೃತ ಮ್ಯೂಸಿಕ್ ವಿಡಿಯೊಗಳು ಬಳಕೆದಾರರ ಫೇಸ್‌ಬುಕ್ ಪೇಜ್‌ನಲ್ಲಿ ಕಾಣಿಸಿಕೊಳ್ಳುತ್ತವೆ. ಸದ್ಯದ ಮಟ್ಟಿಗೆ ಫೇಸ್‌ಬುಕ್, ತನ್ನ ಬಳಕೆದಾರರು ಹಾಗೂ ಫೇಸ್‌ಬುಕ್ ಪೇಜ್‌ನಲ್ಲಿ ತಮ್ಮದೇ ಆದ ಅಧಿಕೃತ ವಿಡಿಯೊಗಳನ್ನ ಪೋಸ್ಟ್ ಮಾಡುವ ಕಲಾವಿದರಿಗಾಗಿ ಮಾತ್ರ ಈ ಆ್ಯಪ್ ಅನ್ನು ಪರಿಚಯಿಸಲಿದೆ.

ಇದಕ್ಕಾಗಿ ಹೊಸ ಪೇಜ್ ಅನ್ನು ಫೇಸ್‌ಬುಕ್ ಕ್ರಿಯೇಟ್ ಮಾಡಲಿದ್ದು, ಅದಕ್ಕೆ 'ಆರ್ಟಿಸ್ಟ್ ನೇಮ್' ಎಂದು ಹೆಸರಿಸುವ ಸಾಧ್ಯತೆಯಿದೆ. ಈ ಪುಟವು ಬಳಕೆದಾರರಿಗಾಗಿ ಫೇಸ್‌ಬುಕ್ ವಾಚ್‌ನಲ್ಲಿ ಕಾಣಲಿದ್ದು, ಈ ಜಾಗದಲ್ಲಿ ಹೊಸ ಮ್ಯೂಸಿಕ್ ವಿಡಿಯೊ ವಿಭಾಗವನ್ನು ಸಹ ರಚಿಸಬಹುದಾಗಿದೆ.

ಫೇಸ್‌ಬುಕ್‌ನಲ್ಲಿ ಹೊಸ ಮ್ಯೂಸಿಕ್ ವಿಡಿಯೊವನ್ನು ಅಪ್‌ಲೋಡ್ ಮಾಡಿದಾಗಲೆಲ್ಲಾ



ಕಲಾವಿದರ ಫಾಲೋವರ್ಸ್‌ಗಳಿಗೆ ನೋಟಿಫಿಕೇಶನ್ ತಲುಪಲಿದೆ. ಅಲ್ಲದೆ ಈ ಪೇಜ್‌ನ ಮಾಲೀಕರು ಮ್ಯೂಸಿಕ್ ವಿಡಿಯೊಗಳನ್ನು ಅಪ್‌ಲೋಡ್ ಮಾಡುವ ಅಗತ್ಯವಿಲ್ಲ. ಈ ಕೆಲಸವನ್ನು ಫೇಸ್‌ಬುಕ್ ಮಾಡಲಿದೆ.

ಫೇಸ್‌ಬುಕ್‌ನಲ್ಲಿ ನಿರ್ದಿಷ್ಟ ಕಲಾವಿದರ ಪುಟಕ್ಕಾಗಿ ಮ್ಯೂಸಿಕ್ ವಿಡಿಯೊಗಳು ಪ್ರತ್ಯೇಕ ವಿಡಿಯೊಗಳ ಟ್ಯಾಬ್‌ನಲ್ಲಿ ಗೋಚರಿಸುತ್ತವೆ. ಕಲಾವಿದರು ಈ ಮ್ಯೂಸಿಕ್ ವಿಡಿಯೊಗಳ ಮೇಲೆ ನಿಯಂತ್ರಣ ಹೊಂದಿರುತ್ತಾರೆ. ಕಲಾವಿದರ ಹೆಸರು, ವಿವರಣೆ ಮತ್ತು ಥಂಬ್‌ನೇಲ್‌ಗಳಂತಹ ವಿಷಯಗಳನ್ನು ತೆಗೆದುಹಾಕಬಹುದು ಅಥವಾ ಎಡಿಟ್ ಮಾಡುವ ಅವಕಾಶವನ್ನು ನೀಡಲಾಗಿದೆ.

ಮ್ಯೂಸಿಕ್ ವಿಡಿಯೊಗಳಿಗೆ ಪರವಾನಗಿ ನೀಡಲು ಫೇಸ್‌ಬುಕ್ ಯುನಿವರ್ಸಲ್ ಮೀಡಿಯಾ ಗ್ರೂಪ್, ಸೋನಿ ಮ್ಯೂಸಿಕ್ ಮತ್ತು ವಾರ್ನರ್ ಮ್ಯೂಸಿಕ್ ಗ್ರೂಪ್‌ನೊಂದಿಗೆ ಮಾತುಕತೆ ನಡೆಸಿದೆ ಎಂದು ಹೇಳಲಾಗಿದೆ. ಹೀಗೆ ಸಾಕಷ್ಟು ಮ್ಯೂಸಿಕ್‌ಗಳನ್ನು ತನ್ನದಾಗಿಸಿಕೊಳ್ಳಲು ಹೊರಟಿರುವ ಫೇಸ್‌ಬುಕ್, ಮುಂದಿನ ದಿನಗಳಲ್ಲಿ ಯುಟ್ಯೂಬ್‌ಗೆ ಸ್ಪರ್ಧೆ ಒಡ್ಡಲಿದೆಯೇ ಎನ್ನುವುದನ್ನು ಕಾದು ನೋಡಬೇಕು. ■


ॐ ✝ ☪ ಸರ್ವೇಜನಃ ಸುಖಿನೋ ಭವಂತುಃ ॐ ✝ ☪

ಸಮಸ್ಯೆ ನಿಮ್ಮದು ಪರಿಹಾರ ನಮ್ಮದು



ಶ್ರೀ ಸಾಯಿಬಾಬ ಉಪಾಸಕರು

ದಕ್ಷಿಣ ಭಾರತದಾದ್ಯಂತ ಜನಮನ್ನಣೆ ಪಡೆದಿರುವ ವಂಶಪಾರಂಪರಿಕ

ವಶೀಕರಣ ಮಾಂತ್ರಿಕರು

ಶ್ರೀಯುತ ಪರಶುರಾಮ್ ಗುರೂಜಿ

ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ವ್ಯಾಪಾರಾಭಿವೃದ್ಧಿ, ಜಮೀನು ವಿಚಾರ, ಕೋರ್ಟ್‌ಕೇಸ್, ಮಾಟಮಂತ್ರ, ಪ್ರೇತಬಾಧೆ ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ ಕೇರಳ ಮತ್ತು ಕೊಳ್ಳೇಗಾಲದ 16ನೇ ಶತಮಾನದ ಪ್ರಾಚೀನ ತಾಳೆಗ್ರಂಥದ ರಹಸ್ಯವಾದ ಮಹಾರುದ್ರಶೂಲ ಪ್ರಣವಶಕ್ತಿಯಿಂದ

ಕೇವಲ 5 ದಿನದಲ್ಲಿ 100% ಪರಿಹಾರ ಶತಸಿದ್ಧ

ನೀವು ಎಷ್ಟೋ ದೈವ, ದೇವಸ್ಥಾನ ಮತ್ತು ಜ್ಯೋತಿಷ್ಯರಲ್ಲಿ ಕೇಳಿ ಪರಿಹಾರ ಸಿಗದೆ ನೊಂದಿದ್ದರೆ ಶೀಘ್ರ ಪರಿಹಾರಕ್ಕಾಗಿ ಇವರನ್ನೊಮ್ಮೆ ಭೇಟಿಮಾಡಿ.

ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ:

9620444460

ಖಾಯಂ ಮನೆ ವಿಳಾಸ: ಜೈಬಾಲಾಜಿ ಜ್ಯೋತಿಷ್ಯಂ

ಬನಶಂಕರಿ ದೇವಸ್ಥಾನದ ಹತ್ತಿರ, ಮುಖ್ಯಬಸ್‌ನಿಲ್ದಾಣದ ಪಕ್ಕದಲ್ಲಿ, ಬನಶಂಕರಿ ಬೆಂಗಳೂರು.

ವಿಶೇಷ ಸೂಚನೆ: ಈ ಪೇಪರ್ ಕಟ್ಟಿಂಗ್ ತಂದವರಿಗೆ ಮುಜರಾಯಿ ಇಲಾಖೆ ಮತ್ತು ಧಾರ್ಮಿಕ ದತ್ತಿ ಇಲಾಖೆ ಹಾಗೂ ಮಾಡಾಯಿಕಾವ್ ಭಗವತಿ ದೇವಸ್ಥಾನಂ (ತಳಿಪರಂ) ಕೇರಳ ವತಿಯಿಂದ ಉಚಿತ ಸೇವೆಗಳು ಮತ್ತು ಪರಿಹಾರಗಳು ಲಭ್ಯವಿದೆ.